ಅಧ್ಯಕ್ಷರು : ಈಗ ನನಗೆ ನೀವು ಮಾರ್ಗದರ್ಶನ ಕೊಡಬೇಕು ಪ್ರಶ್ನೋತ್ತರ ಮುಗಿದು ಮೂರು ನಿಮಿಷವಾಯಿತು ಇನ್ನೂ 4 ಪ್ರಶ್ನೆಗಳು ಬಾಕಿ ಉಳಿದಿವೆಈ ನಾಲ್ಕು ಪ್ರಶ್ನೆಗಳನ್ನು ಬಿಯಾಂಡ್ ಕ್ವೋಶ್ಚನ್ ಅವರೆ ತೆಗೆದುಕೊಳ್ಳಬೇಕೆ? ಅಥವಾ ಈ ಇಲಾಖೆಯ ಪ್ರಶ್ನೆಗಳು ಇನ್ನೊಂದು ದಿವಸ ಬಂದಾಗ ಆ ದಿವಸಕ್ಕೆ ಈ ಪ್ರಶ್ನೆಗಳನ್ನು ಪೋಸ್ಟ್ ಮಾಡಿಕೊಳ್ಳೋಣವೇ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹತ್ತು ನಿಮಿಷದಲ್ಲಿ ಎಲ್ಲಾ ಮುಗಿಸಿ

Mr. Speaker : unless all the members cooperate.

ಇದು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲಾ ಕಡೆ ಬರುತ್ತದೆ, ಸಾರ್ವಜನಿಕ ಮಹತ್ವದ ಸಮಸ್ಯೆಯಾಗಿದೆ, ಹಾಗೂ ನಾವು 4 ತಿಂಗಳಿಗೆ ಸಭೆ ಸೇರಿರುವುದರಿಂದ ಹೀಗಾಗಿದೆ 3 ತಿಂಗಳಿಗೆ ಒಮ್ಮೆ ಸೇರಿದರೆ ಈ ಪ್ರಶ್ನೆಬರುವುದಿಲ್ಲ.

ವಿಷಯ : ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಜಾಗೃತ ದಳ ಪತ್ತೆ ಮಾಡಿರುವ ಪ್ರಕರಣಗಳು

252 (2203)-ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) 1996-97ನೇ ಸಾಲಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಜಾಗೃತದಳ ಒಟ್ಟು ಎಷ್ಟು ವಿದ್ಯುತ್ ಕಳವು ಪ್ರಕರಣಗಳನ್ನು ಹಾಗೂ ವಿದ್ಯುತ್ ದುರುಪಯೋಗ ಮಾಡಿರುವ ಪ್ರಕರಣಗಳನ್ನು ಪತ್ತೆ ಮಾಡಿದೆ? (ಪ್ರತಿ ತಿಂಗಳಿನ ಪ್ರತ್ಯೇಕ ವಿವರ ಕೊಡುವುದು)

ಆ) ಇದರ ದಂಡವಾಗಿ ಮಂಡಳಿಯು ಎಷ್ಟು ಹಣವನ್ನು ಸಂಗ್ರಹ ಮಾಡಿದೆ?

ಇ) ಜಾಗೃತ ದಳವು ಇದುವರೆಗೂ ಎಷ್ಟು ಕಂಪೆನಿಗಳ ಮೇಲೆದಾಳಿ ಮಾಡಿದೆ, ಹಾಗೂ ಇದರ ಮೇಲೆ ತೆಗೆದುಕೊಂಡಿರುವ ಕ್ರಮಗಳ ವಿವರ ನೀಡುವುದು?

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು)

ಅ) 1996-97ನೇ ಸಾಲಿನಲ್ಲಿ ಏಪ್ರಿಲ್ 1996ರಿಂದ ಮಾರ್ಚ್ 97ರ ವರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಜಾಗೃತದಳದವರು ಒಟ್ಟು 168 ವಿದ್ಯುತ್ ಕಳುವು ಪ್ರಕರಣಗಳನ್ನು ಹಾಗೂ

ಒಟ್ಟು 2818 ವಿದ್ಯುತ್ ದುರುಪಯೋಗ ಮಾಡಿರುವ ಪ್ರಕರಣಗಳನ್ನು ಪತ್ತೆ ಮಾಡಿದ್ದಾರೆ (ಪ್ರತಿ ತಿಂಗಳಿನ ವಿವರಗಳು ಪಟ್ಟಿಯನ್ನು ಇದರ ಜೊತೆಗೆ ಲಗತ್ತಿಕರಿಸಲಾಗಿದೆ)

ಆ) ವಿದ್ಯುತ್ ಕಳುವು ಪ್ರಕರಣಗಳಲ್ಲಿ ರೂ. 1,68,21,688.00 ಮತ್ತು ವಿದ್ಯುತ್ ದುರುಪಯೋಗ ಪ್ರಕರಣಗಳಲ್ಲಿ ರೂ. 7,00,61,823 ಗಳನ್ನು ದಂಡವಾಗಿ ಸಂಗ್ರಹ ಮಾಡಿದೆ.

ಒಟ್ಟು ರೂ. 8,68,83,511.00

ಇ) ಜಾಗೃತದಳವು ಒಟ್ಟು 138 ಕಾರ್ಖಾನೆಗಳ (ಎಲ್‌ಟಿ-5) ಮೇಲೆ ದಾಳಿ ಮಾಡಿದೆ ಹಾಗೂ ಇದರ ಮೇಲೆ ಸಂಬಂಧಪಟ್ಟ ಪೋಲೀಸ್ ಠಾಣೆಗಳಲ್ಲಿ ಕೇಸುಗಳನ್ನು ದಾಖಲು ಮಾಡಲಾಗಿದೆ.

Statement Showing The Number of Cognizable and Non-Cognizable Cases Booked by the Vigilance Squad of S. P. (Vigilance), Bangalore and Hubli
During the period from April 1996 to March - 1997.

Month & Year	No. of in Stallation Checked	No. Of Cog. Cases booked	Amount of BBC Rs.	No. of Nor-cog Cases booked	Amount of BBC Rs.	Total of BBC in Rs.
1	2	3	4	5	6	7
April `96	1934	5	7,12,756/-	176	42,22,163/-	49,34,922/-
May `96	1868	6	6,98,907/-	202	47,67,900/-	54,06,807/-
June `96	1930	9	6,13,617/-	195	58,23,248/-	64,36,865/-
July `96	1794	12	11,54,421/-	162	43,63,205/-	55,17,626/-
August `96	1913	20	9,87,995/-	229	46,81,128/-	56,69,123/-
Sept. `96	1620	8	6,02,527/-	218	45,39,406/-	51,41,935/-
Oct. `96	1763	11	4,27,161/-	265	50,79,505/-	55,06,666/-
Nove `96	1702	20	15,13,310/-	290	76,73,032/-	91,57,342/-
Dec. `96	1880	19	43,54,301/-	207	48,03,311/-	91,57,612/-

1		2	3	4	5	6	7
Jan.	`97	2033	22	19,95,878/-	271	72,42,552/-	92,38,430/-
Feb.	`97	2301	17	16,75,703/-	265	84,78,936/-	1,01,54,639/-
March	`97	2298	19	20,85,109/-	328	83,87,437/-	1,04,72,546/-
	Grand	**Total**	**168**	**1,68,21,688/-**	**2,868**	**7,00,61,823/-**	**8,68,83,511/-**

ಶ್ರೀ ಎಸ್. ಸುರೇಶ್‌ಕುಮಾರ್ : ಸಚಿವರು ಉತ್ತರ ಕೊಡುವಾಗ ಈ ಒಂದು ವರ್ಷದಲ್ಲಿ ವಿದ್ಯುತ್ ಕಳವು 8,68,83,000-00 ಇತ್ತು ಹಾಗೂ ದುರುಪಯೋಗ ಪ್ರಕರಣಗಳಲ್ಲಿ ದಂಡವಾಗಿ ಹಣ ಸಂಗ್ರಹ ಮಾಡಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹಿಂದೆ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ದೇವೇಗೌಡರು ಒಂದು ಮಾತನ್ನು ಹೇಳಿದರು ರಾಜ್ಯದಲ್ಲಿ ವಾರ್ಷಿಕ 500 ಮೆ.ವ್ಯಾ.ಗಿಂತ ಕಡಿಮೆ ಇಲ್ಲದಂತೆ ವಿದ್ಯುತ್ ಕಳವು ಆಗುತ್ತಿದೆ. ಕೆಲವು ಕೈಗಾರಿಕೋದ್ಯಮಿಗಳು ಹಾಗೂ ಇನ್ನೂ ಹಲವಾರು ಪ್ರಭಾವಶಾಲಿ ಕೆಇಬಿ ಅಧಿಕಾರಿಗಳು ಷಾಮೀಲಾಗಿ ಈ ಪ್ರಮಾಣದ ವಿದ್ಯುತ್ ಕಳವುಮಾಡುತ್ತಿದ್ದದು ನನ್ನ ಗಮನಕ್ಕೆ ಬಂದಿದ್ದು ದಿಗ್ಭ್ರಮೆ ಉಂಟು ಮಾಡಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ತಾವು 7 ಕೋಟಿ ರೂಪಾಯಿ ಕಲೆಕ್ಟ್ ಮಾಡಿದ್ದೀರಿ ಈ ರೀತಿ ಭಾರಿ ಪ್ರಮಾಣದ ಕಳ್ಳತನ ಕೆಜಿಯಲ್ಲಿ ಆಗುತ್ತಿರುವುದಕ್ಕೆ ಮೂಲ ಕಾರಣ ಏನು ಎಂದು ಕಂಡುಹಿಡಿದಿದ್ದೀರಾ? ಆ ರೀತಿ ಕಳವು ಆಗದೇ ಇರುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ? ಅನೇಕ ಪ್ರಕರಣಗಳಲ್ಲಿ ಇವತ್ತು ಕೆಇಬಿನಲ್ಲಿ ಲೆಡ್ಜರ್ ತೆಗೆದಿಲ್ಲ. ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ರೈತರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೋ ಲೆಡ್ಜರ್ ಓಪನ್ ಮಾಡದೇ ಇರುವ ಅಧಿಕಾರಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಮೀಟರ್ ರೇಟಿಂಗ್ ಎಂದು ಮಾಡಬೇಕು, ಡೋಮಾಸ್ಟಿಕ್ ಆದರೆ 2 ವರ್ಷಕ್ಕೊಮ್ಮೆ ಮೀಟರ್ ರೇಟಿಂಗ್ ಮಾಡಬೇಕು ನಾನ್ ಡೊಮಾಸ್ಟಿಕ್ ಆದರೆ ಪ್ರತಿ ವರ್ಷಕ್ಕೆ ಮಾಡಬೇಕು, ಎಷ್ಟು ವರ್ಷದಿಂದ ತಾವು ರೇಟಿಂಗ್ ಮಾಡಿದ್ದೀರಿ? ಆಮೇಲೆ ಕೆಇಬಿನಲ್ಲಿ ಇನ್ನು ಈ ರೀತಿ ಗ್ರಾಹಕರು ಕಳ್ಳತನ ಮಾಡುವುದನ್ನು ತಪ್ಪಿಸುವುದಕ್ಕೆ ಏನು ಕ್ರಮತೆಗೆದುಕೊಂಡಿದ್ದೀರಿ?

ಶ್ರೀ ಶರಣಬಸಪ್ಪ ದರ್ಶಾನಪುರ : ಮಾನ್ಯ ಸದಸ್ಯರು ಹೇಳಿದ ಹಾಗೆ ವಿದ್ಯುತ್ ಕಳವಿನ ಬಗ್ಗೆ ಸರ್ಕಾರ ಕೂಡ ಸಾಕಷ್ಟು ಚುರುಕಾಗಿ ಕೆಲಸ ಮಾಡುತ್ತಾ ಇದೆ. ಈಗಾಗಲೇ ಸುಮಾರು 8 ಕೋಟಿ ರೂಪಾಯಿಗಳ ವಿದ್ಯುತ್ ದಂಡ ವಿಧಿಸಿಹಣ ಕೂಡ ಸಂಗ್ರಹ ಮಾಡಿದೆ. ಈಗ ಬೇರೆ ಬೇರೆ ಸೆಕ್ಟಾರ್‌ನಲ್ಲಿ ಕೂಡ ನಾವು ಎಲೆಕ್ಟಾನಿಕ್ಸ್ ಮೀಟರ್ ಅನ್ನು ಅಳವಡಿಸುತ್ತಿದ್ದೇವೆ, ನಾವು ರಾಜ್ಯದಲ್ಲಿ ಎಲ್ಲಾ ಕಡೆ ಒಳ್ಳೆಯ ಮೀಟರ್ ಅಳವಡಿಸ ಬೇಕಾದರೆ ಸಾಕಷ್ಟು ದುಡ್ಡು ಕೊರತೆ ಇರುವುದರಿಂದ, ಹಂತ ಹಂತವಾಗಿ ನಾವು ಈ ಮೀಟರ್ಸ್ ಗಳನ್ನು ಅಳವಡಿಸುತ್ತಾ ಇದ್ದೇವೆ, ಎಲ್ಲಿಲ್ಲಿ ಮೀಟರ್ ಹಾಕಿದ್ದೇವೆ ಅಲ್ಲಿ ಮೊದಲು ಇರತಕ್ಕಂಥ ಮೀಟರ್ 100 ಯೂನಿಟ್ ಓಡಿದರೆ ಹೊಸ ಮೀಟರ್ 120 ರಿಂದ 125 ಯೂನಿಟ್ ಓಡುತ್ತಿರುವುದು ಕಂಡು ಬಂದಿದೆ. ಹಾಗೂ ಇದರಲ್ಲಿ ಸಾಕಷ್ಟು ಕಳ್ಳತನ ಪತ್ತೆಹಚ್ಚಿದ್ದೇವೆ, ಇದರಿಂದ ಹೆಚ್ಚಿನ ವ್ಯವಸ್ಥೆಯನ್ನು ವಿಜಿಲೆನ್ಸ್‌ರವರಿಗೆ ಕೊಟ್ಟಿದ್ದಾರೆ,

ಇದರಿಂದ ಸಾಕಷ್ಟು ವಿದ್ಯುತ್ ಕಳವಿನ ಮಾಹಿತಿ ನಮಗೆ ಬರುತ್ತದೆ ಮತ್ತು ತನಿಖಾ ದಳ ರೈಡ್ಸ್ ಮಾಡುತ್ತಿದ್ದಾರೆ. ಇದರ ಮುಖಾಂತರ ನಾವು ಈಗಾಗಲೇ ಸಾಕಷ್ಟು ಕೇಸುಗಳನ್ನು ಬುಕ್ ಮಾಡಿದ್ದೇವೆ. ಇದರಲ್ಲಿ ಸಂಪೂರ್ಣವಾದ ತಿಂಗಳಾವಾರು ಮಾಹಿತಿ ಕೂಡ ಕೊಟ್ಟಿದ್ದೇವೆ. ಮೀಟರ್ ರೇಟಿಂಗ್ ಬಗ್ಗೆ ನಮಗೆ ಮಾಹಿತಿ ಅದರ ಬಗ್ಗೆ ತಮಗೆ ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿಕೊಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : 500 ಮೇ. ವ್ಯಾ. ಅಂದರೆ 1500 ಕೋಟಿ, ಒಂದು ವರ್ಷಕ್ಕೆ 1500 ಕೋಟಿಗಳ ವಿದ್ಯುತ್ ಕಳವು ಆಗುತ್ತಿದೆ ಎಂದು ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದಾಗ ಇವತ್ತು 8 ಕೋಟಿ ರೂಪಾಯಿ ಕಲೆಕ್ಟ್ ಮಾಡಿ ಬಹಳ ದೊಡ್ಡ ಸಾಹಸ ಮಾಡಿದ್ದೇವೆ ಎಂದು ಹೇಳಿದ್ದಾರೆ. ನಮಗೆ ಒಂದು ಸೋಜಿಗ ಏನಿಸುತ್ತದೆ ಕೆಇಬಿಗೆ ಮೋಸವನ್ನು ಕೈಗಾರಿಕೋದ್ಯಮಗಳು ಮಾಡುವುದು ಗೊತ್ತು ಆದರೆ ಕೈಗಾರಿಕೆಗಳು ಮಾತ್ರವಲ್ಲ ರಾಜ್ಯ ಸರ್ಕಾರವೇ ಕೆಇಬಿಗೆ ಮೋಸ ಮಾಡುತ್ತಿದೆ ಎನ್ನುವುದು ವಿಚಿತ್ರವಾದರೂ ಸತ್ಯ. ರಾಜ್ಯದ ಅಧಿಕಾರ ಪೀಠ ಇರುವ ವಿಧಾನ ಸೌಧದಲ್ಲಿಯೇ ವಿದ್ಯುತ್ ಮೀಟರ್ ದೋಷಪೂರಿತವಾಗಿದ್ದು ಸರ್ಕಾರದವರು ನ್ಯಾಯಬದ್ಧವಾಗಿ ಕೊಡಬೇಕಾದ ಶುಲ್ಕಕ್ಕಿಂತ ಸೇಕಡ 30 ರಷ್ಟು ಕಡಿಮೆ ಕೊಡುತ್ತಿತ್ತು, ಇದನ್ನು ರಾಜ್ಯದ ವಿದ್ಯುತ್ ಕಾರ್ಯದರ್ಶಿ ಶ್ರೀ ಕೆ. ಪಿ. ಸಿಂಗ್‌ರವರೇ ಹೇಳಿದ್ದಾರೆ. ದೊರೆನೇ ಹೇಗೆ ಮಾಡುತ್ತಾ ಇದ್ದರೆ ಇನ್ನೂ ಪ್ರಜೆಗಳ ಗತಿ ಏನೂ ಇದಕ್ಕೆ ಮುಖ್ಯಮಂತ್ರಿಗಳು ಉತ್ತರ ಹೇಳಬೇಕು.

ಅಧ್ಯಕ್ಷರು : ಸರ್ಕಾರ ಕಟ್ಟುವುದನ್ನು ಕಡಿಮೆ ಮಾಡುವುದಕ್ಕೆ ಯಾರು ಹಾಗೆ ಮಾಡುವುದಕ್ಕೆ ಹೋಗುತ್ತಾರೆ? ಪ್ರೈವೇಟ್ ಕನ್‌ಸ್ಯೂಮರ್ಸ್ ಇದ್ದರೆ ಅವರಿಗೆ ಹೊರೆ ಬೀಳುತ್ತದೆ, ತಪ್ಪಿಸಿಕೊಳ್ಳುವುದಕ್ಕೆಮೀಟರನ್ನು ಕೆಡಿಸುವುದು ಇನ್ನೊಂದೋ ಮತ್ತೊಂದೋ ಮಾಡುತ್ತಾರೆ. ಸರ್ಕಾರದಲ್ಲಿ ಎಷ್ಟು ಬಂದರೇನು? ಯಾರು ಅದನ್ನು ಕೆಡಿಸಿ ಕಡಿಮೆ ಮಾಡುವುದಕ್ಕೆ ಹೋಗಬೇಕು? ಅಷ್ಟು ಆಸಕ್ತಿಯಿಂದ ಸರ್ಕಾರಕ್ಕೆ ವಿದ್ಯುತ್ ದರವನ್ನು ಕಡಿಮೆ ಮಾಡಬೇಕು ಎಂದು ಪ್ರಾಮಾಣಿಕ ಪ್ರಜ್ಞೆಯಿಂದ ಕೆಲಸ ಮಾಡುವವರು ಇಲ್ಲಿ ಇದ್ದಾರೆಯೇ? ಇದ್ದರೆ ಬಹಳ ಖುಷಿ ನನಗೆ. ಯಾರು ಮಾಡುತ್ತಾರೆ ಹಾಗೆ?

ಶ್ರೀ ವಾಟಾಳ್ ನಾಗರಾಜ್ : ಹಾಗದರೆ ಸರ್ಕಾರದ ಕೆಲಸ ದೇವರ ಕೆಲಸ ಎಂದು ಬೆರೆಯುತ್ತಿದ್ದೀರಿ. ಏಕೆ. ಹೀಗೆ ಮೋಸ ಮಾಡುವುದಕ್ಕೆ?

ಅಧ್ಯಕ್ಷರು : ಇರಲಿ. ಆಮೇಲೆ ಚರ್ಚೆ ಮಾಡೋಣ.

ಶ್ರೀ ಎಸ್. ಸುರೇಶ್‌ಕುಮಾರ್ : ಬಹಳ ಮುಂಚಿನಿಂದ ಕೆ.ಇ.ಬಿ.ಯಲ್ಲಿ ಇದಕ್ಕೆ ಒಂದು ಪ್ರಾವಿಷನ್ ಇದೆ. ಪ್ರತಿವರ್ಷ ಮೀಟರ್ ರೇಟಿಂಗ್ ಮಾಡಬೇಕು. ಏಕೆ ಮಾಡುತ್ತಿಲ್ಲ ಪ್ರತಿವರ್ಷ ಹೋಗಿ ಚೆಕ್ ಮಾಡಬೇಕು. ಓಡುತ್ತಿದೆಯೋ ದೋಷಪೂರಿತ ಇದೆಯೇ ಹೇಗೆ ಓಡುತ್ತಿದೆ ಎಂಬುದನ್ನು ನೋಡಬೇಕು.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಮೀಟರುಗಳನ್ನು ಈಗಾಗಲೇ ಮಾನ್ಯಸಚಿವರು ಹೇಳಿದಹಾಗೆ ಎಲೆಕ್ಟಾನಿಕ್ಸ್ ಮೀಟರ್ಸ್‌ಗಳನ್ನು ಎಲ್ಲಾ ಕಡೆ ಅಳವಡಿಸುವುದಕ್ಕೆ ಕಂಪಲ್‌ಸರಿ ಮಾಡುತ್ತಿದ್ದೇವೆ. ಹೈಟಿನ್‌ಷನ್ ಯೂಸರ್ಸ್‌ಗೆ ಮಾತ್ರ ಇಮ್ಮಡಿಯೇಟ್ ಆಗಿ ಮಾಡುತ್ತಿದ್ದೇವೆ. ಸುಮಾರು ಹತ್ತು ಲಕ್ಷ ಪಂಪ್‌ಸೆಟ್ಸ್ ಇದ್ದಾವೆ. ಅವಕ್ಕೆಲ್ಲಾ ಈಗಾಗಲೇ ಹಾಕುವುದಕ್ಕಾಗುವುದಿಲ್ಲ. ಪ್ರಯತ್ನಪಟ್ಟರೆ ಎರಡು ಮೂರು ವರ್ಷದಲ್ಲಿ ಮಾಡಬಹುದು. ಮಾನ್ಯ ದೇವೇಗೌಡರ ಹೇಳಿಕೆ ಏನಿತ್ತು ಎಂದರೆ ಸುಮಾರು ಎಂದು ಅವರು ಹೇಳಿರುವುದು. ಕರಾರು ವಾಕ್ ಏನಿಲ್ಲ. 500 ಮೆಗಾವ್ಯಾಟ್ಸ್ ಅಷ್ಟು ಆಗುವುಲ್ಲ. ವಾಸ್ತವಿಕವಾಗಿ ಅಷ್ಟಾಗುವುದಿಲ್ಲ ಅವರು ಅಂದಾಜು ಹೇಳಿದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ : 300 ಮೆಗಾವ್ಯಾಟ್ಸ್ ಎಂದು ಇಟ್ಟುಕೊಳ್ಳಿ 300 ಮೆಗಾವ್ಯಾಟ್ಸ್ ಎಂದು ಇಟ್ಟುಕೊಂಡರೂ ಒಂದೂವರೆ ಸಾವಿರ ಕೋಟಿ ರೂಪಾಯಿಗಳಾಯಿತು.

ಶ್ರೀ ಜೆ. ಹೆಚ್. ಪಟೇಲ್ : ಇದೇನು ವ್ಯಾಪಾರವೇ ಯಡಿಯೂರಪ್ಪನವರೇ? ನಮ್ಮದು 18.5 ಮೆಗಾವ್ಯಾಟ್ಸ್.

ಶ್ರೀ ವಾಟಾಳ್ ನಾಗರಾಜ್ : ಒಂದು ಒಳ್ಳೆಯ ಸಲಹೆ ಬಂದಿದೆ. ಈ ಸಂದರ್ಭದಲ್ಲಾದರೂ ಬಿಜೆಪಿ ಜೊತೆಯಲ್ಲಿ ಸ್ವಲ್ಪ ಹೊಂದಾಣಿಕೆ ಮಾಡಿಕೊಳ್ಳಿ.

ಶ್ರೀ ಜೆ. ಹೆಚ್. ಪಟೇಲ್ : ಒಳ್ಳೆಯ ಸಲಹೆ

ಅಧ್ಯಕ್ಷರು : ವಸಂತ ಸಾಲಿಯಾನರವರೇ ಪ್ರಶ್ನೆ ಸಂಖ್ಯೆ : 253 (2389)ರ ಬಗ್ಗೆ ನಮ್ಮ ಸಿಬ್ಬಂದಿಯವರು ಬಂದು ಹೇಳಿದರು, ಒಂದೇ ಸ್ವರೂಪದ ಪ್ರಶ್ನೆ ಅಂದರೆ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಮೂರು ಜನ ಸದಸ್ಯರು ಪ್ರಶ್ನೆ ಕಳುಹಿಸಿದಾಗ ನಾವು ಏನು ಮಾಡಿದ್ದೇವೆ ಎಂದರೆ ಎಲ್ಲರಿಗೂ ಅವಕಾಶ ಸಿಗಬೇಕು ಎಂದು ಜಂಟಿಯಾಗಿ ಪ್ರಶ್ನೆಯನ್ನು ಒಂದು ಮಾಡುತ್ತೇವೆ. ತಮಗೆ ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. ತಾವು

ಏನಾದರೂ ಕೇಳುವುದಿದ್ದರೆ ಕೇಳಿ. ಮೊದಲು ಬ್ಯಾಲೆಟ್‌ಗೆ ಹಾಕಿದಾಗ ಫಸ್ಟ್ ಯಾರ ಹೆಸರು ಬಂದಿರುತ್ತದೋ ಅವರ ಹೆಸರಿಗೆ ಮಾಡಿರುತ್ತೇವೆ. ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಪ್ರತಾಪ್ ಚಂದ್ರ ಶೆಟ್ಟರು ಬಂದಿದ್ದಾರೆಯೇ? ಅವರು ಇಲ್ಲ ಅಂದರೆ ತಾವು ಎರಡನೆಯವರು. ತಾವೇ ಪ್ರಶ್ನೆಯನ್ನು ಕೇಳಿ.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತದಿಂದ ಉಂಟಾಗಿರುವ ಹಾನಿ

253 (2019)-ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) 1995-96, 1996-97ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತದಿಂದ ಉಂಟಾಗಿರುವ ಹಾನಿಯ ಪ್ರಮಾಣವೆಷ್ಟು (ಮನೆ ಇತರ ಸ್ವತ್ತು ಭೂಮಿ, ಇತ್ಯಾದಿ ಪ್ರತ್ಯೇಕ ವಿವರ ನೀಡುವುದು)

ಆ) ಸಮುದ್ರ ಕೊರೆತ ತಡೆಯಲು ಸರಕಾರದವರು ತೆಗೆದುಕೊಂಡಿರುವ ಕ್ರಮಗಳೇನು:

ಇ) ರಕ್ಷಣಾ ಗೋಡೆ ರಚನೆಗಾಗಿ ಈ ಅವಧಿಯಲ್ಲಿ ಸರ್ಕಾರದವರು ವೆಚ್ಚ ಮಾಡಿದ ಹಣವೆಷ್ಟು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯ ಕಡಲ ತೀರದಲ್ಲಿ 1995-96ರಲ್ಲಿ 3263 ಮೀ. ಹಾಗೂ 1996-97ನೇ ಸಾಲಿನಲ್ಲಿ 2372 ಮೀ. ಉದ್ದಕ್ಕೂ ಕೊರತೆ ಉಂಟಾಗಿದೆ. ಕೊರೆತದಿಂದ ಹಾನಿಗೊಳಗಾದ ಆಸ್ತಿ, ಪಾಸ್ತಿಗಳ ಅದ ಈ ಕೆಳಗಿನಂತಿದೆ.

ಉಡುಪಿ ತಾಲ್ಲೂಕಿನಲ್ಲಿ 1995-96ರ ಸಾಲಿನಲ್ಲಿ 0.41 ಎಕರೆ ಭೂಮಿ ಕೊರೆತಕ್ಕೊಳಗಿದ್ದು, ಸುಮಾರು 10 ತೆಂಗಿನ ಮರಗಳು 1996-97ರಲ್ಲಿ 0.08 ಎಕರೆ ಜಮೀನುಗಳು ಕೊರೆತಕ್ಕೊಳಗಾಗಿದ್ದು, 6 ತೆಂಗಿನ ಮರಗಳು ಮೀನಿನ ಸೆಡ್ ಹಾಗೂ 3 ವಿದ್ಯುತ್ ಕಂಭಗಳು ಸಮುದ್ರ ಪಾಲಾಗಿವೆ.

ಮಂಗಳೂರು ತಾಲ್ಲೂಕಿನಲ್ಲಿ 1995ರಲ್ಲಿ ಉಳ್ಳಾಲ ಸಸಿಹಿತ್ಲು, ಮುಕ್ಕ, ಹೊಸಭಾ, ಕುಳಾಯಿ, ಗುಡಕೊಪ್ಪಗಳಲ್ಲಿ ಸಮುದ್ರ ಹೊಡೆತ ಉಂಟಾಗಿದ್ದು, 135 ಕುಟುಂಬಗಳನ್ನು ಈ ಕೊರೆತದಿಂದ 10 ಮನೆಗಳು ಪೂರ್ತಿಯಾಗಿ ಹಾಗೂ 30 ಮನೆಗಳು ಭಾಗು ಹಾನಿಯಾಗಿವೆ.